
ಕರ್ಕಿ ಕೃಷ್ಣಮೂರ್ತಿ

# ಮಗುವಿನ ತುಟಿಯ ಮೇಲೆ ಬಳೆಚೂರಲ್ಲಿ ಎಳೆದ ಗೆರೆಗಳ ಕಾಣಿಸುವ ಕತೆಗಳು




**ಡುಮಿಂಗ**
**(ಕಥಾಸಂಕಲನ)**
ಲೇ: ಶಶಿ ತರೀಕೆರೆ
ಪು: 108 ; ಬೆ: ರೂ. 90
ಪ್ರ: ಛಂದ ಪುಸ್ತಕ,
ಐ–004, ಮಂತ್ರಿ ಪ್ಯಾರಡೈಸ್,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು – 560 076

'ಛಂದ ಪುಸ್ತಕ' ಬಹುಮಾನ ಪಡೆದ ಕಥಾಸಂಕಲನದ ಬಗ್ಗೆ ಕುತೂಹಲ ಸಹಜ. ಇದುವರೆಗೂ ಒಂದೂ ಕಥಾಸಂಕಲನ ಪ್ರಕಟಿಸದವರಿಗೆ ಇರುವ ಸ್ಪರ್ಧೆ ಅದು. ಅಂದರೆ ಕನ್ನಡ ಕಥಾಲೋಕಕ್ಕೆ ಹೊಸ ಕಥೆಗಾರರ ಪ್ರವೇಶ. ಹೀಗಾಗಿ ಈ ಪುಸ್ತಕಗಳ ಮೇಲೆ ಸ್ವಾಭಾವಿಕವಾಗಿ ಒಂದಿಷ್ಟು ನಿರೀಕ್ಷೆಗಳಿರುತ್ತವೆ. ಈ ವರ್ಷದ ಬಹುಮಾನಿತ ಕೃತಿಯಾದ ಶಶಿ ತರೀಕೆರೆಯವರ 'ಡುಮಿಂಗ' ನಮ್ಮ ನಿರೀಕ್ಷೆಗಳನ್ನು ಹುಸಿಗೊಳಿಸುವುದಿಲ್ಲ.

ಶಶಿಯವರ ಕಥಾಪ್ರಪಂಚ ವಿಭಿನ್ನವಾದುದು; ಹಾಗೇ ಅವರು ಸೃಜಿಸುವ ಪಾತ್ರಗಳೂ ಕೂಡಾ. ರಿಮಾಂಡ್ ಹೋಮಿನ ಅಡುಗೆಯವನು, ಹಳ್ಳಿ ರೂಟಿನ ಬಸ್ಸಿನ ಕಂಡಕ್ಟರ್, ಕಟಿಂಗ್ ಶಾಪ್‌ನ ಚಿಕ್ಕ ಹುಡುಗ, ಸಿನಿಮಾ ಟಾಕೀಸಿನಲ್ಲಿ ಕೆಲಸ ಮಾಡುವವ, ಮಟ್ಕಾ ಚೀಟಿ ಬರೆಯುವವ – ಹೀಗೆ ಸಮಾಜದಲ್ಲಿ ತಮ್ಮದೇ ಸ್ತರ ಹಾಗೂ ಘನತೆ ಹೊಂದಿರುವ ಹತ್ತು ಹಲವಾರು ಜೀವಗಳ ಸುತ್ತ ಅವರ ಕಥೆಗಳು ಗಿರಕಿ ಹೊಡೆಯುತ್ತವೆ. ಆ ಅನನ್ಯ ಲೋಕದ ನೋವು, ನಲಿವು, ವಿಷಾದ, ವ್ಯಂಗ್ಯದ ಅನಾವರಣವನ್ನು ನಾವು ಇಲ್ಲಿಯ ಕತೆಗಳಲ್ಲಿ ಕಾಣಬಹುದು. ಒಂದು ನಿರ್ಭಾವುಕ ಧಾಟಿಯಲ್ಲಿ ಶಶಿ ಕತೆಯನ್ನು ಹೇಳುತ್ತಾರೆ. ಅವರ ನಿರೂಪಣೆಯ ಮೇಲ್ನೋಟದ ಅಣಕದಲ್ಲಿ ಗಾಢ ವಿಷಾದವೂ ಅಡಗಿದೆ. 'ಕತ್ತಲಿನ ದುರ್ಗಮ ರಸ್ತೆಯಲ್ಲಿ ತಳ್ಳಿಕೊಂಡು ಹೋಗುವ ವೇಗದಲ್ಲಿ ಆತ ಬೈಕು ಓಡಿಸುತ್ತಿದ್ದ' ಎನ್ನುವ ಸಾಲಿನಲ್ಲಿ ಎದ್ದು ಕಾಣುವ